# ಹಾಬ್ಸ್ ಆ್ಯಂಡ್ ಷಾ

‘ಫಾಸ್ಟ್ ಆ್ಯಂಡ್ ಫ್ಯೂರಿಯಸ್’ ಚಿತ್ರಗಳ ಸರಣಿ ಇದೀಗ ಒಂದು ಕಲ್ಟ್‌ನಂತೆಯೇ ಬೆಳೆದಿದೆ. ಪ್ರತಿ ಸಲ ಈ ಸರಣಿಯ ಸಿನಿಮಾ ಬಂದಾಗಲೂ ಜಗತ್ತಿನಾದ್ಯಂತ ಪ್ರೇಕ್ಷಕರು ಮುಗಿಬಿದ್ದು ನೋಡುತ್ತಿದ್ದಾರೆ. ‘ಜಗತ್ತಿನಾದ್ಯಂತ ಅತಿ ಹೆಚ್ಚು ಗಳಿಕೆಯ 9ನೇ ಚಿತ್ರವಿದು’ ಎನ್ನುತ್ತಿದೆ ಯೂನಿವರ್ಸಲ್ ಪಿಕ್ಚರ್ಸ್. ಈವರೆಗೆ ಬಂದಿರುವ ಈ ಸರಣಿಯ ಚಿತ್ರಗಳು ಒಟ್ಟು 5 ಶತಕೋಟಿ ಡಾಲರ್ ಗಳಿಸಿವೆಯಂತೆ. ಈಗ ಈ ಸರಣಿಯ ಹೊಸ ಚಿತ್ರ ‘ಹಾಬ್ಸ್ ಆ್ಯಂಡ್ ಷಾ’ ತೆರೆಗೆ ಬಂದಿದೆ. ಡ್ವೇಯ್ನ್ ಜಾನ್ಸನ್ ಮತ್ತು ಜೇಸನ್ ಸ್ಟಥಾಂ ಆ್ಯಕ್ಷನ್‌ಪ್ರಿಯ ಪ್ರೇಕ್ಷಕರನ್ನು ರಂಜಿಸಲು ಮತ್ತೆ ಜೋಡಿಯಾಗಿದ್ದಾರೆ.

2017ರಲ್ಲಿ ತೆರೆಗೆ ಬಂದ ‘ದಿ ಫೇಟ್ ಆಫ್ ದಿ ಫ್ಯೂರಿಯಸ್’ ಚಿತ್ರದ ಕಥೆ ಕೊನೆಗೊಂಡಲ್ಲಿಂದ, ಈ ಹೊಸ ಚಿತ್ರ ಶುರುವಾಗುತ್ತದೆ. ವೈರಸ್ ಮೂಲಕ ಜಗತ್ತನ್ನೇ ನಾಶ ಮಾಡಲು ಬರುವ ಸೈಬರ್ ಜೀವಕೋಶಗಳನ್ನು ಹೊಂದಿರುವ ಖಳನನ್ನು ಬಗ್ಗುಬಡಿಯುವ ಕಥೆ. ಡೇವಿಡ್ ಲೀಚ್‌ನ ನಿರ್ದೇಶನ ಮತ್ತು ಜೊನಾಥನ್ ಸೆಲಾ ಕ್ಯಾಮೆರಾ ಕೆಲಸ ಚಿತ್ರವನ್ನು ಉಸಿರು ಬಿಗಿಹಿಡಿದು ನೋಡುವಂತೆ ಮಾಡಿದೆ ಎನ್ನಲಾಗುತ್ತಿದೆ.

■ ಹನಿ




